9-30 P. M.

SRI H. SIDDAVEERAPPA .—I entirely agree with the Leader of the Opposition. I do not think any human being can give this for human consumption. ಕೊಟ್ಟರೆ ಯಾವ ಕನ್‌ಸ್ಯೂಮರ್ಸ್ ಇದನ್ನು ತೆಗೆದುಕೊಂಡು ಹೋಗುತ್ತಾರೆ ?

ಶ್ರೀ ಎಚ್. ಡಿ. ದೇವೇಗೌಡ .—ಸರ್ಕಾರದ ಮೇಲೆ ದೂರು ಹೊರಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾನು ಇದನ್ನು ತೆಗೆದುಕೊಂಡು ಬಂದಿಲ್ಲ. ಉಪ್ಪಾರಿನ ಪಂಚಾಯಿತಿ ಚೇರ್ಮನ್‌ರವರ ಎದುರಿನಲ್ಲಿ ನನ್ನ ಎದುರಿನಲ್ಲಿ ೧೦ ಮೂಟೆ ಅಕ್ಕಿ ಜೀಲ್ಲಪನ್ನು ಬಿಚ್ಚಿ ಜನರಿಗೆ ಕೊಡುತ್ತಿದ್ದರು, ಆ ರೀತಿ ಹಂಚುತ್ತಿದ್ದಂಥ ಅಕ್ಕಿಯ ಸ್ವಲ್ಪ ಭಾಗವನ್ನು ನಾನು ಇಲ್ಲಿ ತಂದು ತಮಗೆ ತೋರಿಸಿದ್ದೇನೆ ಇಡೀ ಅಕ್ಕಿಯೆಲ್ಲಾ ಹಸಿರು ಬಂದಿದೆ. ಪಾಪ ಬಡವರು ಅವರು ಕೊಟ್ಟಿದ್ದನ್ನು ತೆಗೆದುಕೊಂಡು ಹೋಗುತ್ತಾರೆ. ಸಿಕ್ಕಪೆ ಸಾಕೆಂದು ತೃಪ್ತಿ ಪಡುತ್ತಾರೆ. I have witnessed it with my own eyes.

ಶ್ರೀ ಎಚ್. ಸಿದ್ದವೀರಪ್ಪ .—ಇಷ್ಟಲ್ಲ ಈ ಫುಡ್ ಪಾಯಿಸನ್ ಅನೇಕ ರೀತಿಯಲ್ಲಿ ಆಗುತ್ತಿದೆ. ಇದರಿಂದ ಜನರ ಆರೋಗ್ಯ ಕೆಟ್ಟು ಹೋಗುತ್ತಿದೆ ಈ ಫುಡ್ ಪಾಯಿಸನ್‌ಗೆ ನಾವು ಒಂದು ಪ್ರಿವೆಂಟೀವ್ ಆ್ಯಕ್ಷನ್‌ನ್ನು ತೆಗೆದುಕೊಳ್ಳುತ್ತೇವ. ಈವಾಗ ಏನಾಗುತ್ತಿದೆ ಎಂದರೆ ಎಲ್ಲಾ ಪದಾರ್ಥಗಳಿಗೂ ಅನೇಕ ರೀತಿಯಲ್ಲಿ ಮಿಕ್ಚರ್ ಮಾಡುತ್ತಿದ್ದಾರೆ. ಹಮ್ಮ ಆ್ಯಬೊರೇಟರಿಗೆ ಹೋಗಿ ನೋಡಿದ್ದೇನೆ. ಪ್ಯಾಲಿಥಿನ್ ಬ್ಯಾಗ್ ಒಂದಂಲ್ಲ ಇದ್ದ ಅರಿಶಿಣವನ್ನು ಕೆವಿಕಲ್ಸ್, ಹಾಕಿ ಟೆಸ್ಟ್ ಮಾಡಿದಾಗ ಅದರಲ್ಲಿ ಗೋಪಿ ಕಲರ್ ಸೇರಿಸಿರುವುದು ಗೊತ್ತಾಯಿತು. ಹೀಗೆ ಕೆಲವರಿಗೆ ಮಿಕ್ಚರ್ ಮಾಡುವ ಹವ್ಯಾಸವಿರುತ್ತದೆ. ಇದು ಆಗಬಾರದು ಆಗುತ್ತಿದೆ. ಇದು ಆಗದಂತೆ ನೋಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ .—ಅರಿಶಿಣ ಒಂದಕ್ಕೇ ಅಲ್ಲ ಕಂಕಮ ಮಂತ್ರಿತರ ಪದಾರ್ಥಗಳಿಗೂ ಮಿಕ್ಚರ್ (ಕಲಬೆರಕೆ) ಆಗುತ್ತಿದೆ.

(*ii*) *re : Fire Accident in the house of Joint Director of Industries*

SRI B. PUTTASWAMIAH .—I call the attention of the Hon. Chief Minister regarding fire accident in the house of Sri Dharmendra Deo, Joint Director of Industries and Commerce.

SRI H. M. CHANNABASAPPA .—(Minister for Public Works and Electricity) .—Sir on behalf of the Chief Minister, I beg to state as follows. On 10—8—1974, at about 00.30 hours information was received by H. C. 615 Boraiah at Rajajinagar Police Station from Control Room regarding the Fire Accident in the house of Shri Dharmendra Deo Mishra, Joint Director of Industries and Commerce. Immediately, he proceeded to the spot and noticed that a window pane was broken and some waste paper dipped in kerosine was burnt on the window shutter. There was soot (block powderv substance) on the broken window pane. Some burnt paper was lying inside the bedroom and also outside the window. The total damage is estimated at Rs. 10/— only.

It was learnt on enquiry that Shri Dharmendra Deo Mishra had been to second Show Picture along with his family members, leaving the maid servant and two small children at home. The maid servant heard some sound at about 11—15 p. m. when she was in the kitchen. Immediately she noticed that the window pane was broken and two

persons running away towards the main road. She contacted Shri Pande, Secretary, City Improvement Trust Board, over telephone regarding his incident and also Shri Muthu Krishna, a neighbour who came to the spot and returned to his house after informing her not to be afraid of the incident.

After about 15 minutes she noticed the flames at the broken window pane and shouted for help. Shri Muthu Krishna came there soon. Meanwhile, Shri Dharmendra Deo Mishra also returned and he informed this incident to the Police Station. Immediately the Police Sub—Inspector rushed to the spot and seized two match boxes and burnt match sticks lying inside the bed room after enquiry. A detailed Mahazar was drawn.

The incident was registered in Rajajinagar Police Station C. Misc. No. 564/74 dated 10—11/8/1974. The spot was inspected by the Circle Inspector of Police, Malleswaram Sub Division and the Assistant Commissioner of Police, Malleswaram Division. The local Police are instructed to keep proper vigilance. A point book is kept in the above said premises to facilitate regular checking round the clock. All precautionary measures have been taken to prevent further mischief. The incident seems to be the work of some mischief mongers. A sharp look out has been kept to trace the movements of the mischief mongers and to take further action.

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈಗ ಏನೊಂದು ಘಟನೆ ನಡೆದಿದೆ, ಅದರ ಬಗ್ಗೆ ಬಹಳ ಲಘುವಾಗಿ ಹೇಳಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಸಚ್ಚಾರಿತ್ರರಾಗಿರತಕ್ಕಂಥ ಉನ್ನತಾಧಿಕಾರಿಗಳು ಆಡಳಿತವನ್ನು ನಡೆಸುವುದಕ್ಕೆ ಪ್ರಾಣಾಪಾಯವಿದೆ, ಏನ್ನುವುದಕ್ಕೆ ಅನೇಕ ನಿದರ್ಶನಗಳು ಇವೆ. ಇದರ ಹಿನ್ನೆಲೆ ಏನೆಂಬುದನ್ನು ತಮ್ಮ ಅವಗಾಹನೆಗೆ ತರುವುದು ಅತ್ಯಗತ್ಯ. ಈ ಅಧಿಕಾರಿಯು ಈಗಿರತಕ್ಕಂಥ ಅಧಿಕಾರದ ಹುದ್ದೆಯನ್ನು ವಹಿಸಿಕೊಂಡು ಮೇಲೆ ಬೋಗಸ್ ಕೋಟಾ ತೆಗೆದುಕೊಂಡು ನಡೆಸುತ್ತಿದ್ದ ವ್ಯವಹಾರವನ್ನೆಲ್ಲ ಇವರು ಹತ್ತಿಕಲಿಲ್ಲವೇ? ಇವರೇ ಖುದ್ದಾಗಿ ಇಂಡಸ್ಟ್ರಿ ಮತ್ತಿತರ ಕೇಂದ್ರಗಳನ್ನು ನೋಡಿ, ಸಂದರ್ಶನ ಮಾಡಿ ಕೋಟಾ ಪರ್ಮಿಷನ್ ಪಡೆದಂ ಮಾರಾಂತ್ತಿದ್ದಂಥವರ ಕೋಟಾ ತಪ್ಪಿಸಲಿಲ್ಲವೇ ? ಈ ರೀತಿ ಕೋಟಾ ತಪ್ಪಿ ಹೋದಂಥ ಜನ ಗುಂಡಾಗಳನ್ನು ಸೇರಿಸಿ ಸಂಚು ಮಾಡಿ ಆದರ ಹಿನ್ನೆಲೆಯುಲ್ಲಿ ವಿಧಾನಸೌಧದಲ್ಲಿರುವ ಈ ಅಧಿಕಾರಿಗೆ ನಿಮ್ಮ ಮಂತ್ರಿಮಂಡಲದಲ್ಲಿರುವ ಒಬ್ಬರೂ, ಇಂಥವರಿಗೆ, ಅಂಥವರಿಗೇ ಕೂಡಿ ಎಂದು ನಿರ್ದೇಶನ/ ಕೊಡುತಾ ಇರಲಿಲ್ಲವೇ ? ಇವತ್ತು ಸತ್ಯವಾಗಿ ನಡೆದಂತ ಅಧಿಕಾರಿಗೆ ಏನು ಪರಿಣಾಮ ವಾಗಿದೆ ಎನ್ನುತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಅದರ ಬಗ್ಗೆ ತಮ್ಮ ವಿವರಣೆ ಏನು ಎಂಬುದನ್ನು ಹೇಳುತ್ತಿರಾ ? ಸ್ವಾಮಿ.

ಶ್ರೀ ಎಚ್. ಎಂ. ಚನ್ನಬಸಪ್ಪ:—ಮಾನ್ಯ ಸದಸ್ಯರು ಹೆಚ್ಚಿನ ವಿವರಣೆಗಳನ್ನ ಕೋಟ್ಟಿರುವುದು ಬಹಳ ಸಂತೋಷ, ಅವೆಲ್ಲವನ್ನು ದೃಷ್ಟಿಯಲ್ಲಟ್ಟುಕೊಂಡು ತನಿಖೆ ಮಾಡಲಾಗುವುದು.

ಶ್ರೀ ಬಿ. ಪುಟ್ಟಸ್ವಾಮಯ್ಯ:—ಚಿಟಿಕೆ ಹೊಡೆದ ಹಾಗೆ ಮಾನ್ಯಮಂತ್ರಿಗಳು ಹೇಳಿಬಿಟ್ಟಿರು. ಚಿಟಿಕೆ ಜವಾಬನ್ನು ಕೊಡುವಂಥವರನ್ನು ನಿಮ್ಮ ಮಂತ್ರಿಮಂಡಲದಲ್ಲಿ ಇಟ್ಟು ಕೊಂಡಿದ್ದೀರಿ. ಅದು ಬಹಳ ದಿವಸ ನಡೆಯುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ:—ತಾವು ಹೇಳಿದಂಥ ಎಲ್ಲಾ ವಿಷಯಗಳನ್ನು ಅಗತ್ಯವಾಗಿ ಪರಿಶೀಲನ ಮಾಡಿಸುತ್ತೇವೆ. ಹಾಗೂ ಮಿಸ್‌ಚೀಫ್ ಮಾಡಿದಂಥವರನ್ನು ಪತ್ತೆ ಹಚ್ಚುವುದಕ್ಕೆ ತಾವು ಹೇಳಿದ್ದು ಸಹಾಯಕವಾಗುತ್ತವೆಂದು ನಾನು ಹೇಳಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಅಧ್ಯಕ್ಷರೇ, ಒಂದೇ ಪದದಲ್ಲಿ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಿದರು. ಈ ಸಮಸ್ಯೆಯನ್ನು ಚಿಟಿಕೆ ಹೊಡೆದಂತೆ ಮಾಡುತ್ತೇವೆಂದು ಹೇಳಿದರ್ಮ ಆದರೆ ಇದನ್ನು ತನಿಖೆ ಮಾಡುವವರು ಯಾರು ? ಸಾಮಾನ್ಯ ಸರ್ಕಾರಿ ಅಧಿಕಾರಿಗಳ ಮೇಲೆ ನಡೆದಿರತಕ್ಕಂಥ ಘಟನೆಯನ್ನು ತನಿಖೆ ಮಾಡತಕ್ಕಂಥ ಕಾಲದಲ್ಲಿ ಪ್ರಭಾವ ಬೀರತಕ್ಕಂಥ ಮಂತ್ರಿಗಳು ಇರುವಾಗ ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಲು ಯಾರನ್ನು ನೇಮಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಅಧ್ಯಕ್ಷರ ಮುಖಾಂತರ ನಮ್ಮ ಈ ಸಭೆಗೆ ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ:—ಈ ಘಟನೆಯನ್ನು ಪತ್ತೆ ಹಚ್ಚಲು ಪೊಲೀಸ್ ಕಮಿಷನರ್ ರವರು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಯಾರು ಯಾರು ಆ ಅಧಿಕಾರಿಗೆ ತೊಂದರೆ ಮಾಡ ಬಹುದು ಎನ್ನತಕ್ಕಂಥದ್ದನ್ನು ಸ್ವಲ್ಪ ಯೋಚನೆ ಮಾಡಿ ಸಾಧ್ಯವಾದಷ್ಟು ಅವರಿಗೆ ರಕ್ಷಣೆ ಕೊಡಬೇಕು ಎನ್ನತಕ್ಕಂಥದ್ದು ಸರ್ಕಾರದ ಆಶಯವಿದೆ. ಸತ್ಯವಂತರಾಗಿ ಕೆಲಸ ಮಾಡತಕ್ಕವರು ಯಾವುದೇ ಶತ್ರುಗಳಾಗಿದ್ದರು ಒಪ್ಪಿಕೊಳ್ಳುತ್ತೇವೆ. ಅದರಲ್ಲಿ ಏನೂ ಭಿನ್ನಾಭಿಪ್ರಾಯವಿಲ್ಲ. ಅವರಿಗೆ ರಕ್ಷಣೆ ಕೋಡಬೇಕಾದ್ದು ಸರ್ಕಾರದ ಕರ್ತವ್ಯವಿದೆ ಅದನ್ನು ಕೊಡುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ:—ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಕೇವಲ ೧೦ ರೂಪಾಯಿ ಗಳು ಮಾತ್ರವೆಂದು ಹೇಳಿದ್ದಾರೆ, ಹಣದ ಪ್ರಮಾಣದಲ್ಲಿ ಈ ಘಟನೆಯನ್ನು ಅಳಿಯಬಾರದು. ಇಲ್ಲಿ ಏನಾಗಿದೆ ಎಂದರೆ, ಈ ಅಧಿಕಾರಿ. ಅವರ ಹೆಂಡತಿ ಮತ್ತು ಇಬ್ಬರೇ ಮಕ್ಕಳು ಮಲಗಿರತಕ್ಕಂಥ ಬೆಡ್ ರೂಮಿಗೆ ಬರೀ ಸೀಮೆ ಎಣ್ಣೆಯಲ್ಲಿ ಪೆಟ್ರೋಲ್‌ನಲ್ಲಿ ಬಟ್ಟೆ ಜೂರುಗಳನ್ನು, ಪೇಪರ್ ಚೂರು ಗಳನ್ನು ಅದ್ದಿ ಒಳಗಡೆ ಎಸೆದಿದ್ದಾರೆ. ಅವರ ಮುಖ್ಯ ಉದ್ದೇಶ ಅದರ ಕುಟುಂಬವನ್ನೇ ಧ್ವಂಸ ಮಾಡಬೇಕು ಎನ್ನತಕ್ಕಂಥದ್ದು ಇತ್ತು. ಹಿಂದೆ ಒಂದು ಸಾರಿ ತಮಗೆ ಪ್ರಾಣಾಪಾಯವಿದೆ. ಎಂದು ಹೇಳಿದಂಥ ಮಂತ್ರಿಗಳ ಬಾಯಿಯಿಂದ ಇವತ್ತಿನ ದಿವಸ ಇಂಥ ಜವಾಬು ಬರುತಿದೆ. ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ನಾನು ಸ್ವಲ್ಪ ಉದ್ದೇಶದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಇವತ್ತು ಈ ಸರ್ಕಾರದಲ್ಲಿ ಸತ್ಯವಂತರಾದ ರಾಜಕಾರಣಿಗೆ ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಏನಿದ್ದರೂ ದೊಂಬಿಬಜಾಯಿಸುವವರಿಗೆ ರಕ್ಷಣೆ ಇದೆ.

ಅಧ್ಯಕ್ಷರ:— ತಾವು ಬಹಳ ದೂರ ಹೊಗುತ್ತಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ:— ಸತ್ಯದಿಂದ ಕೆಲಸ ಮಾಡುವ ಅಧಿಕಾರಿಗಳಿಗೆ ಅವಶ್ಯಕವಾದ ಪ್ರಮಾಣದಲ್ಲಿ ರಕ್ಷಣೆಯನ್ನು ಕೊಡಲಾಗುತ್ತೇವೆಂದು ನಾನು ಸ್ಪಷ್ಟವಾಗಿ ಆಶ್ವಾಸನೆ ಕೊಡುತ್ತಿದ್ದೇನೆ. ಇಲ್ಲಿ ಹತ್ತು ರೂಪಾಯಿಗಳಷ್ಟು ಡ್ಯಾಮೇಜ್ ಆಯಿತು ಎಂಬತಕ್ಕ ವಾಸ್ತವಾಂಶವನ್ನು ತಮಗೆ ತಿಳಿಸಿದ್ದೇನೆ. ಅದನ್ನು ಬಿಟ್ಟು ಸಾವಿರ ರೂಪಾಯಿಗಳಷ್ಟು ಡ್ಯಾಮೇಜ್ ಆಯಿತು ಎಂದು ಹೇಳು ಮುದು ಯೋಗ್ಯವಾದುದಲ್ಲ, ಹತ್ತು ರೂಪಾಯಿಗಳಷ್ಟು ಮಾತ್ರ ಡ್ಯಾಮೇಜ್ ಆಗಿರುವುದರಿಂದ ಆದನ್ನು ನಾವು ಲಘುವಾಗಿ ತೆಗೆದುಕೊಂಡಿದ್ದೇವೆಂದು ತಾವು ತಿಳಿಯಬಾರದು. ಮುಖ್ಯವಾಗಿ ಸತ್ಯ ವಂತ ಅಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಈ ಗುಂಡಾಜನರಿಂದ ತೊಂದರೆಯಾಗಬಾರದು ಎಂದು ಏನು ತಾವು ಹೇಳುತ್ತಿದ್ದೀರಿ ಆದನ್ನು ನಾನು ಒಪ್ಪಿಕೊಳ್ಳುತೆ ನೆ.

ಶ್ರೀ ಕಾಗೋಡು ತಿಮ್ಮಪ್ಪ:—ಹಾಗಿದ್ದರೆ ರಕ್ಷಣೆ ಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ:—ಕೊಟ್ಟಿದ್ದೇವೆ. ಪ್ರತಿದಿವಸ, ಪೆತಿಹುಳಿಗೆಯಲ್ಲಿ ಅವರ ರಕ್ಷಣೆಯ ಬಗ್ಗೆ ವಾಚ್ ಮಾಡಲಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:—ಮಾಟಾ ಮಾಡಿಸಿದರೆ ಏನು ಮಾಡುವುದು ?

ಶ್ರೀ ಬಿ. ಪುಟ್ಟಸ್ವಾಮಯ್ಯ—ಆ ಜನರು ಮಾಯಾ, ಮಾಟಾ ಮಾಡಿಸುವುದನ್ನು ಸಹ ಕಲಿತಿದ್ದಾರೆ

ಶ್ರೀ ಎಚ್. ಎಂ. ಚನ್ನಬಸಪ್ಪ:— ಅಂತಹವರು ಸಹ ನಮ್ಮ ದೇಶದಲ್ಲಿದ್ದಾರೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ:— ಈ ಪೋಲೀಸ್ ಇಲಾಖೆಗೆ ಕಳ್ಳರನ್ನು ಹಿಡಿಯುವುದಕ್ಕೆ ಮೋಸಗಾರ ರನ್ನು ಹಿಡಿಯುವುದಕ್ಕೆ, ಕೊಲೆಗಾರರನ್ನು ಹಿಡಿಯುವುದಕ್ಕೆ ಸಾಧ್ಯವಾಗದಿದ್ದರೆ, ಆ ಇಲಾಖೆಯಾ ದರೂ ಏತಕ್ಕೆ ಇರಬೇಕು ? ಅದನ್ನು ತೆಗೆದುಬಿಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ—ಅದಕ್ಕೂ ವಿಧಿನಿಯಮಗಳಿವೆ. ಅದರ ಪ್ರಕಾರ ಮಾಡಬೇಕಾಗುತ್ತದೆ

Paper laid on the Table

Sri S. M. KRISHNA:—On behalf of the Minister for Finance and Information, I lay : the advance report of the Comtroller and Auditor General of India for the year 1972–73 (Civil) of the Goverment of Karnataka.
as required by article 151 (2) of the Constitution of India.

SUPPLEMENTARY ESTIMATES FOR 1974-75 (1st INStALMENT) PRESENTATION

SRI S. M. KRISHNA :– on behalf of the Minister for Finance and Information, I present the supplementary estimates for the year 1974–1975 (from 1st April, 1974 to 31st March, 1975) First instalment.

as required under article 205 of (1) of the Constitution of India.

Allegedwith drawal of the State Representatives for the Krishna water Tribunal.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಕೃಷ್ಣಾ ಜಲ ವಿವಾದದ ಬಗ್ಗೆ ನಾನು ತಮಗೆ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಈಗ ಅದರ ಸಭೆ ನಡೆಯುತ್ತದೆ. ನಮಗೆ ಅದರಿಂದ ನ್ಯಾಯ ದೊರಕುವುದಿಲ್ಲವೆಂದು ನಮ್ಮ ರಾಜ್ಯದ ಪ್ರತಿನಿಧಿಗಳು ಪ್ರತಿಭಟನೆಮಾಡಿ ಹೊರಗೆ ಬಂದಿದ್ದಾರೆ. ಈಗ ಅವರು ಒಂದು ಗೈರು ಹಾಜರಿಯಲ್ಲಿ ಆ ಪಂಚಾಯಿತಿಯವರು ತೀರ್ಮಾನ ತೆಗೆದುಕೊಳ್ಳುವ ಸಂಭವವಿದೆ.

ಅಧ್ಯಕ್ಷರು: ನಾಳೆ ಅದು ಚರ್ಚೆಗೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:— ನಮ್ಮ ರಾಜ್ಯದ ಪ್ರತಿನಿಧಿಗಳ ಗೈರುಹಾಜರಿಯಲ್ಲಿ ಅವರೆ ಏನಾದರೂ ತೀರ್ಮಾನ ತೆಗೆದುಕೊಂಡುಬಿಟ್ಟರೆ ನಮಗಿರುವ ಒಂದು ಹಕ್ಕು ಮೊಟಕಾಗಿಬಿಡುತ್ತದೆ, ನಂತರ ನಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಆ ಬಗ್ಗೆ ಏನಾದರೂ ಒಂದು ಪರಿಹಾರ ಸರ್ಕಾರದ ವಲಯದಿಂದ ಬರುವ ವರೆಗೆ ಆ ಪಂಚಾಯಿತಿ ಸಭೆಯನ್ನು ತಾತ್ಕಾಲಿಕವಾಗಿ ಅರ್ಜಿನೆ ಮಾಡಿ ಎಂದು ಹೇಳಬೇಕಾಗುತ್ತದೆ. ಇಲ್ಲವಿದ್ದರೆ ಅವರೇನಾದರೂ ತೀರ್ಮಾನ ತೆಗೆದುಕೊಂಡು ಬಿಟ್ಟರೆ ನಂತರ ಹೊಸ ಸಮಸ್ಯೆ ಉದ್ಭವವಾಗುತ್ತದೆ.

ಅಧ್ಯಕ್ಷರು:—ನಮ್ಮ ರಾಜ್ಯದ ಪ್ರತಿನಿಧಿಗಳು ಹೊರಬಂದ ಮೇಲೆ ಅವರು ಹೇಗೆ ತೀರ್ಮಾನಕ್ಕೆ ಬರುತ್ತಾರೆ ? ಆ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆಂಬುದನ್ನು ಕೇಳೋಣ.

Sri H. M. CHANNABASAPPA :— (Minister for Public works and Electricity)

The Hon. Members are aware that this question will be discussed tomorrow. Therefor, we need not take it up now we can discuss t tomorrow. The Government is requesting the Tribunal not to roced till the Government takes a decision in the matter. There

(SRI H. M. CHANNABASAPPA)

fore, we can discuss the matter tomorrow. Till that time, it is better that the Hon. Member will not insist.

Feasibility on the Minior and Lift Irigetion Schemes

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) :—ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಒಂದು ಪ್ರಾಮುಖ್ಯವಾದ ವಿಷಯದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಪತ್ರ ಬರೆದಿದೆ. ಅದೇನೆಂದರೆ, ಕರ್ನಾಟಕ ರಾಜ್ಯದ ಮೈನರ್ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್ ಪ್ರಾಜೆಕ್ಟಗಳ ಎಸ್ಟಿಮೇಟ್‌ಗಳು ಮಂಜೂರು ಆಗುವ ಕಾಲಕ್ಕೆ, ಅದರ ಫೀಸಿಬಿಲಿಟಿ ಲಿಮಿಟಿ ೨೫೫೦ ರೂಪಾಯಿಗಳು ಇರಬೇಕೂ ಎಂದು ನಿಯಮವಿದೆ ಅದು ಬಹಳ ವರ್ಷಗಳಿಂದ ನಡೆದುಕೊಂಡು ಬಂದ ಒಂದು ನಿಯಮ. ಆದರೆ ಇಂದು ಏರಿರತಕ್ಕಂಥ ಬೆಲೆಗಳು, ಕೂಲಿಗಳಿಗೆ ಹೆಚ್ಚು ಸಂಬಳ ಕೊಡಬೇಕಾಗಿರುವುದು, ಮೊಸರು ಮತ್ತು ಪೈಪುಗಳ ಬೆಲೆ ಜಾಸ್ತಿಯಾಗಿರುವುದು ಮುಂತಾದವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಒಂದು ಲಿಮಿಟ್‌ನ್ನು ಎರಡೂವರೆ ಸಾವಿರದಿಂದ ೩ ಸಾವಿರಕ್ಕೂದರೂ ಹೆಚ್ಚಿಸದೇ ಹೋದರೆ ಈಗ ಬಜೆಟಿನಲ್ಲಿ ಸೇರಿರುವ ಕಾರ್ಯಕ್ರಮಗಳೂ ಸಹ ತ್ವರಿತವಾಗಿ ಕಾರ್ಯಗತವಾಗುವುದಕ್ಕೆ ಅವಕಾಶವಾಗುವುದಿಲ್ಲ. ಆದಕಾರಣ ಇದರ ಬಗ್ಗೆ ಸರಕಾರದ ನೀತಿ ಏನಿದೆ ಎಂಬುದನ್ನು ತಮ್ಮ ಮೂಲಕ ಸರ್ಕಾರದವರನ್ನು ಕೇಳಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ :— ಇದನ್ನು ನಾವು ಅನೇಕ ಘಟ್ಟಗಳಲ್ಲಿ ಪರಿಶೀಲನೆ ಮಾಡುತ್ತಿದ್ದೇವೆ ಅಭಾವ ಪರಿಸ್ಥಿತಿ ಇರುವ ಕಡೆಗಳಲ್ಲಿ, ಅದು ಇರುವವರೆಗೆ ಈ ಲಿಮಿಟ್‌ನ್ನು ೨ ಸಾವಿರ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಆಜ್ಞೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಇಂದು ಪದಾರ್ಥಗಳ ಬೆಲೆಗಳು, ಕೆಲಸಗಾರರಿಗೆ ಕೊಡುವ ಕೂಲಿ ವಗೈರೆ ಯಥೇಚ್ಚವಾಗಿ ಹೆಚ್ಚಿರುವ ಪ್ರಯುಕ್ತ ಹಿಂದೆ ಯಾವ ಒಂದು ಸೀಲಿಂಗ್ ಲಿಮಿಟ್‌ನ್ನು ಫಿಕ್ಸ್ ಮಾಡಿದ್ದೇವೋ, ಅದು ಇಂದಿನ ಪರಿಸ್ಥಿತಿಗೆ ಹೊಂದುವುದಿಲ್ಲ. ಎಂಬುದು ನಿರ್ವಿವಾದವಾದ ಅಂಶ. ಇದನ್ನು ಬಜೆಟಾವಣೆ ಮಾಡದಿದ್ದರೆ ಯೋಗ್ಯವಾದ ಪ್ರಾಜೆಕ್ಟಗಳನ್ನು ಕೈಬಿಡಬೇಕಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದನ್ನೇ ಸರ್ಕಾರದವರು ಈಗ ಪರಿಶೀಲನೆ ಮಾಡುತ್ತಿದ್ದಾರೆ. ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ: — ಅಭಾವ ಪ್ರದೇಶಗಳಲ್ಲಿ ಈ ಸೀಲಿಂಗ್ ಲಿಮಿಟ್‌ನ್ನು ಜಾಸ್ತಿ ಮಾಡಿದ್ದೇವೆಂದು ಹೇಳಿದರು. ಆದರೆ,.....

ಶ್ರೀ ಎಚ್. ಎಂ ಚನ್ನಬಸಪ್ಪ: — ಆ ರೀತಿ ೨ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದ್ದು ಅಭಾವವಿರುವರೆಗೆ ಮಾತ್ರ. ಆದರೆ ಈಗ ಅಭಾವದ ಪ್ರಶ್ನೆಯಿಲ್ಲ. ಒಟ್ಟಿನಲ್ಲಿ ಎಲ್ಲಾ ಬೆಲೆಗಳು ಹೆಚ್ಚಿರುವ ಪ್ರಯುಕ್ತ ಈಗಿನ ಸೀಲಿಂಗ್ ಲಿಮಿಟ್‌ನಲ್ಲಿ ಕೆಲಸ ಮಾಡುವುದು ಕಷ್ಟವಿದೆ. ಮತ್ತು ಈ ಲಿಮಿಟಿನೊಳಗೆ ಯೋಗ್ಯವಾದಪ್ರಾಜೆಕ್ಟ್ ಕೆಲಸಗಳನ್ನು ಮಂಜೂರು ಮಾಡುವುದು ಕಷ್ಟವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಜಾಸ್ತಿ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ ಪುಟ್ಟಸ್ವಾಮಯ್ಯ:—ಯಾವಾಗ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು. ಇಡೀ ಕರ್ನಾಟಕ ರಾಜ್ಯದ ಜನತೆ ಕಾತುರತೆಯಿಂದ ಇದನ್ನು ಎದುರು ನೋಡುತ್ತಿದ್ದಾರೆ. ಏಕೆಂದರೆ ಈಗ ಬಜೆಟಿನಲ್ಲಿ ಸೇರಿರುವ ಕೆಲಸಗಳು ಸಹ ಆಗುತ್ತಿಲ್ಲ. ಎಲ್ಲ ಕೆಲಸಗಳು ಸಹ ನಿಂತುಹೋಗಿವೆ.

ಶ್ರೀ ಎಚ್. ಎಂ. ಚನ್ನಬಸಪ್ಪ :— ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದಷ್ಟುಬೇಗ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆಂದು ಈಗಾಗಲೇ ಹೇಳಿದ್ದೇನೆ.